# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರಸಮಾಧಾನ ಯೋಜನೆ, 2013 ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂ. ಆಇ 184 ಸಿಎಸ್ಎಲ್ 2013, ದಿ: 02.09.2013.

**ಪ್ರಸ್ತಾವನೆ:**

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ಮತ್ತು 1956ರ ಕೇಂದ್ರ ಮಾರಾಟ ತೆರಿಗೆ ಕಾಯ್ದೆಗಳಡಿಯಲ್ಲಿ ಇರುವ ತೆರಿಗೆ ಮತ್ತಿತರ ಬಾಕಿಯನ್ನು ಕಡಿಮೆಗೊಳಿಸುವ ಉದ್ದೇಶದಿಂದ ಉಲ್ಲೇಖಿತ ಸರ್ಕಾರಿ ಆದೇಶ ದಿನಾಂಕ: 02.09.2013ನ್ನು ಹೊರಡಿಸಿ ಕರಸಮಾಧಾನ ಯೋಜನೆ, 2013ರನ್ನು ಜಾರಿಗೆ ತರಲಾಗಿದೆ. ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಕಾಯ್ದೆಗಳ ವಿವಿಧ ಪ್ರಕರಣಗಳಡಿಯಲ್ಲಿ, ದಿನಾಂಕ: 12.07.2013ರಂದು ಪಾವತಿಯಾಗದೆ, 31.03.2005ರವರೆಗಿನ ವರ್ಷಗಳಿಗೆ ಸಂಬಂಧಿಸಿದಂತೆ ಕರನಿರ್ಧರಣೆ / ಮರುಕರನಿರ್ಧರಣೆಯಂತೆ ವಿಧಿಸಲಾದ ತೆರಿಗೆ ಮತ್ತು ದಂಡ ಹಾಗೂ ತೆರಬೇಕಾಗಿರುವ ಬಡ್ಡಿಗಳ ಬಾಕಿ ಮೊತ್ತಗಳಿಗೆ ಈ ಯೋಜನೆ ಲಭ್ಯವಿರುತ್ತದೆ. ಈ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕ: 30.10.2013 ಹಾಗೂ ತೆರಿಗೆ ಬಾಕಿಯ ಜೊತೆಗೆ ಒಟ್ಟು ದಂಡ ಮತ್ತು ಬಡ್ಡಿ ಬಾಕಿ ಮೊತ್ತದ ಶೇ. 10ರಷ್ಟನ್ನು ಪಾವತಿ ಮಾಡಬೇಕಾದ ಕೊನೆಯ ದಿನಾಂಕ: 31.12.2013ಯಾಗಿರುತ್ತದೆ.

ವ್ಯಾಪಾರಿ ಸಂಘಗಳು ಈ ಯೋಜನೆಯ ಸೌಲಭ್ಯವನ್ನು ಇನ್ನೂ ಹೆಚ್ಚು ವ್ಯಾಪಾರಿಗಳು ಪಡೆಯಲು ಸಾಧ್ಯವಾಗುವಂತೆ ಅದರ ಕಾಲಮಿತಿಯನ್ನು ವಿಸ್ತರಿಸಲು ಮನವಿ ಸಲ್ಲಿಸಿರುತ್ತಾರೆ.

ವ್ಯಾಪಾರಿ ಸಂಘಗಳ ಮನವಿಯನ್ನು ಪರಿಶೀಲಿಸಲಾಗಿ, ಸರ್ಕಾರವು ಈ ಯೋಜನೆಯನ್ನು ಇನ್ನೂ ಮೂರು ತಿಂಗಳ ಕಾಲ ವಿಸ್ತರಿಸಲು ತೀರ್ಮಾನಿಸಿದೆ.

ಅದರಂತೆ, ಮುಂದಿನ ಆದೇಶ.

**_ಸರ್ಕಾರದ ಆದೇಶ ಸಂಖ್ಯೆ ಆಇ 184 ಸಿಎಸ್‌ಎಲ್ 2013, ದಿನಾಂಕ:04-12-2013._**

ಸರ್ಕಾರವು ಆದೇಶ ಸಂಖ್ಯೆ: ಆಇ 184 ಸಿಎಸ್‌ಎಲ್ 2013 ದಿನಾಂಕ: 02.09.2013ರಲ್ಲಿ ನಿಗದಿಪಡಿಸಿದ್ದ ಕಾಲಮಿತಿಯನ್ನು ಈ ಕೆಳಗಿನಂತೆ ವಿಸ್ತರಿಸಲು ನಿರ್ಧರಿಸಿದೆ.

(ಅ) ಕರಸಮಾಧಾನ ಯೋಜನೆ, 2013ರಡಿಯಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28.02.2014.

(ಆ) ಕರಸಮಾಧಾನ ಯೋಜನೆ, 2013ರಡಿಯಲ್ಲಿ ತೆರಿಗೆ, ದಂಡ ಮತ್ತು ಬಡ್ಡಿ ಬಾಕಿ ಮೊತ್ತ ಪಾವತಿಸಲು ಕೊನೆಯ ದಿನಾಂಕ: 31.03.2014.

ಇತರೆ ಷರತ್ತುಗಳಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಆರ್.ಶಶಿಧರ್) 4/12
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಾ.ತೆ.1).

ಇವರಿಗೆ:

1. ವಾಣಿಜ್ಯ ತೆರಿಗೆಗಳ ಆಯುಕ್ತರು, ಗಾಂಧೀನಗರ, ಬೆಂಗಳೂರು.
2. ಮಹಾಲೇಖಪಾಲರು, (ಅಕೌಂಟ್ಸ್)/(ಆಡಿಟ್), ಕರ್ನಾಟಕ ಬೆಂಗಳೂರು.
3. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭಾ ಸಚಿವಾಲಯ, ಬೆಂಗಳೂರು.
4. ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವಾಲಯ, ಬೆಂಗಳೂರು.
5. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರಿಗೆ ವಿಶೇಷ ರಾಜ್ಯ ಪತ್ರದಲ್ಲಿ ದಿನಾಂಕ: 04.12.2013 ಪ್ರಕಟಿಸಲು ಮತ್ತು 100 ಪ್ರತಿಗಳನ್ನು ಅರ್ಥಿಕ ಇಲಾಖೆ(ವಾ.ತೆ.1) ಇಲ್ಲಿಗೂ ಮತ್ತು 1000 ಪ್ರತಿಗಳನ್ನು ವಾಣಿಜ್ಯ ತೆರಿಗೆಗಳ ಆಯುಕ್ತರು, ಗಾಂಧಿ ನಗರ, ಬೆಂಗಳೂರು ಇವರಿಗೆ ಸರಬರಾಜು ಮಾಡಲು.